O.S.No.:386/2014

P.W.:1

ಈ ದಿನ ದಿಃ16.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಕೆವಿವಿ ವಕೀಲರಿಂದಃ

ಈ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತಾಗಿರುವುದರಿಂದ ಸ್ವತ್ತು ನಮಗೆ ಬರಬೇಕೆಂದು ಈ ದಾವೆಯನ್ನು ಹಾಕಿರುತ್ತೇನೆ. ದಾವಾಸ್ವತ್ತಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. 1 ಎಕರೆ 20 ಗುಂಟೆಗೆ ದಾವೆಯನ್ನು ಹೂಡಿರುತ್ತೇನೆ. ದಾವಾಸ್ತಿಯು ಕಂಚನಹಳ್ಳಿ ಗ್ರಾಮ ವ್ಯಾಪ್ತಿಗೆ ಬರುತ್ತದೆ. ದಾವಾಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಶಿವಮಾದು ರವರ ಸ್ವತ್ತು, ಪಶ್ಚಿಮಕ್ಕೆ ಕೆರೆ, ಉತ್ತರಕ್ಕೆ ಪುಟ್ಟಮಾದು ರವರ ಸ್ವತ್ತು, ದಕ್ಷಿಣಕ್ಕೆ ಪುಟ್ಟಮಾದು ರವರ ಸ್ವತ್ತು ಇರುತ್ತದೆ.

ನಾನು, 1 ನೇ ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಗಳು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ನಾನು ಕಂಚನಹಳ್ಳಿ ಗ್ರಾಮದಲ್ಲಿ ವಾಸವಿದ್ದೇನೆ. 1 ನೇ ವಾದಿ ಮತ್ತು 4 ನೇ ಪ್ರತಿವಾದಿಯು ಕನಕಪುರ ಟೌನಿನ ಮಳಗಾಳಿನಲ್ಲಿ ವಾಸವಿರುತ್ತಾರೆ. 2 ನೇ ಪ್ರತಿವಾದಿ ಮಹದೇವ್ ಕಂಚನಹಳ್ಳಿ ಗ್ರಾಮದಲ್ಲಿ ವಾಸವಿರುತ್ತಾರೆ. 3 ನೇ ಪ್ರತಿವಾದಿ ಹೊಂಗನೂರು, ಚನ್ನಪಟ್ಟಣ ತಾಲ್ಲೂಕಿನಲ್ಲಿ ವಾಸವಿರುತ್ತಾರೆ. ವಿವಾಹವಾದ ನಂತರ 3 ಮತ್ತು 4 ನೇ ಪ್ರತಿವಾದಿಗಳು ಅವರ ಗಂಡಂದಿರ ಮನೆಗಳಲ್ಲಿ ವಾಸವಿದ್ದಾರೆ ಎಂದರೆ ಸರಿ. 1 ನೇ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳು ವಾಸ ಮಾಡುತ್ತಿರುವ ವಿಳಾಸವನ್ನು ನನ್ನ ವಾದಪತ್ರದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಆಗಾಗ ಬಂದು ಹೋಗುತ್ತಿದ್ದರೂ ಎಂದು ನುಡಿಯುತ್ತಾರೆ.

O.S.No.:386/2014

P.W.:1

ನಮ್ಮ ತಂದೆಯ ಹೆಸರು ಹೊಂಬೇಗೌಡ ಎಂದು ಇರುತ್ತದೆ. ಚಿಕ್ಕಪುಟ್ಟೇಗೌಡ ನನ್ನ ತಾತ. ದಾವಾಸ್ವತ್ತು ನಮ್ಮ ತಾತ ಚಿಕ್ಕಪುಟ್ಟೇಗೌಡ ರವರಿಗೆ ಸೇರಿತ್ತು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾಸ್ವತ್ತು ನಮ್ಮ ತಾತನಿಗೆ ಸೇರಿತ್ತು ಎಂದು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಚಿಕ್ಕಪುಟ್ಟೇಗೌಡ ರವರ ಹೆಂಡತಿಯ ಹೆಸರು ಹೊಂಬಮ್ಮ ಎಂದರೆ ಸರಿ. ಚಿಕ್ಕಪುಟ್ಟೇಗೌಡ ಮತ್ತು ಹೊಂಬಮ್ಮ ಇವರು ಈಗ ಮೃತಪಟ್ಟಿರುತ್ತಾರೆ. ನಮ್ಮ ತಾತ ಚಿಕ್ಕಪುಟ್ಟೇಗೌಡ ರವರಿಗೆ ಮೂರು ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗನಿರುತ್ತಾನೆ. ಈ ದಾವೆಯಲ್ಲಿ ಹೆಣ್ಣು ಮಕ್ಕಳನ್ನು ಪಕ್ಷಕಾರರಾಗಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ.

ನಿಪಿ-1 ರಲ್ಲಿ ಮೂರು ಜನ ಹೆಣ್ಣು ಮಕ್ಕಳನ್ನು ತೋರಿಸಿರುವುದಿಲ್ಲ ಎಂದರೆ ಸರಿ. ಅವರ ಹೆಸರುಗಳನ್ನು ನಿಪಿ-1 ರಲ್ಲಿ ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

ದಾವಾಸ್ವತ್ತನ್ನು ನಮ್ಮ ತಂದೆಯು 1976 ಮತ್ತು 1981 ರಲ್ಲಿ ಮಾರಾಟ ಮಾಡಿರುತ್ತಾರೆ, ಆದರೆ ಅವರ ಹೆಸರು ಮತ್ತು ನಿಖರವಾದ ದಿನಾಂಕ ಮತ್ತು ತಿಂಗಳು ನೆನಪಿಲ್ಲ. ಶ್ರೀ ಗುರುಸಿದ್ದಶಿವಚಾರ್ಯಸ್ವಾಮಿ ರವರು ಈಗ ಬದುಕಿರುವುದಿಲ್ಲ.

ದಿನಾಂಕ.26.07.2007 ನೇ ಇಸವಿಯಲ್ಲಿ ನನ್ನ ತಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆ ಹಾಗೂ ಶ್ರೀ ಗುರುಸಿದ್ದಶಿವಚಾರ್ಯಸ್ವಾಮಿ ರವರ ಜೀವಿತ ಕಾಲದಲ್ಲಿ ನಾನು ದಾವೆಯನ್ನು ಹೂಡಲು ಪ್ರಯತ್ನಪಟ್ಟಿರುವುದಿಲ್ಲ. ನಾನು ದಿ.1.5.1979 ರಲ್ಲಿ ಜನಿಸಿರುತ್ತೇನೆ. ನನಗೆ ಈಗ 46 ವರ್ಷ ವಯಸ್ಸಾಗಿರುತ್ತದೆ. 1 ನೇ ವಾದಿಯು ನನಗಿಂತ 12 ವರ್ಷ ಹಿರಿಯರು, 2 ನೇ ಪ್ರತಿವಾದಿ ನನಗಿಂತ 14 ವರ್ಷ ಹಿರಿಯರು, 3 ನೇ ಪ್ರತಿವಾದಿ ನನಗಿಂತ 8 ವರ್ಷ ಹಿರಿಯರು, 4 ನೇ ಪ್ರತಿವಾದಿ ನನಗಿಂತ 5 ರಿಂದ 6 ವರ್ಷ ಹಿರಿಯರು.

ದಿನಾಂಕ.19.04.1976 ಮತ್ತು ದಿ.02.2.1981 ರಲ್ಲಿ ನಮ್ಮ ತಂದೆ ರವರು ದಾವಾಸರ್ವೆ ನಂ.261/1 ರಲ್ಲಿ 1 ಎಕರೆ 26 ಗುಂಟೆ ವಿಸ್ತೀರ್ಣವನ್ನು ಶ್ರೀ ಗುರುಸಿದ್ದಶಿವಚಾರ್ಯಸ್ವಾಮಿ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾಸ್ವತ್ತು ಮಾರಾಟ ಮಾಡುವ ಸಂದರ್ಭದಲ್ಲಿ ನಾನು, 1 ನೇ ವಾದಿ ಹಾಗೂ 3 ಮತ್ತು 4 ನೇ ಪ್ರತಿವಾದಿಗಳು ಜನಿಸಿರಲಿಲ್ಲ ಎಂದರೆ ಸರಿ.

ಸದರಿ ಕ್ರಯಪತ್ರಗಳ ಆಧಾರದ ಮೇರೆಗೆ ಶ್ರೀ ಗುರುಸಿದ್ದಶಿವಚಾರ್ಯಸ್ವಾಮಿ ಹೆಸರಿಗೆ ಕಂದಾಯ ದಾಖಲೆಗಳು ಬದಲಾವಣೆಯಾಗಿ ಅವರೆ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಶ್ರೀ ಗುರುಸಿದ್ದಶಿವಚಾರ್ಯಸ್ವಾಮಿ ರವರ ಹೆಸರಿಗೆ ಆದಂತಹ ಕಂದಾಯ ದಾಖಲೆಗಳನ್ನು ನಾನು ವಯಸ್ಕನಾದ ನಂತರ ಎಲ್ಲಿಯು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ನಾನು ವಯಸ್ಕನಾದ ನಂತರ ಮೂರು ವರ್ಷಗಳ ಒಳಗೆ ದಾವೆಯನ್ನು ಹೂಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ದಾವಾಸ್ವತ್ತುಗಳು ನಮ್ಮ ಮತ್ತು 1 ರಿಂದ 4 ನೇ ಪ್ರತಿವಾದಿಗಳ ಹೆಸರಿನಲ್ಲಿ

ಬರುತ್ತಿಲ್ಲ ಎಂದರೆ ಸರಿ. ನಾವು ಮತ್ತು 1 ರಿಂದ 4ನೇ ಪ್ರತಿವಾದಿಗಳು ಜಂಟೀ ಸ್ವಾಧೀನದಲ್ಲಿದ್ದೇವೆಂದು ತೋರಿಸಲು ಜಂಟೀ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಮ್ಮ ತಂದೆಯ ಜೀವಿತ ಕಾಲದಲ್ಲಿ ದಾವಾಸ್ವತ್ತುಗಳಲ್ಲಿ ಭಾಗಬರಬೇಕೆಂದು ಕೇಳಿರುತ್ತೇವೆ, ಆದರೆ ನಿಖರವಾದ ದಿನಾಂಕ ತಿಂಗಳು ವರ್ಷ ನೆನಪಿರುವುದಿಲ್ಲ. ನಮಗೆ ಭಾಗಬರಬೇಕೆಂದು ನಮ್ಮ ತಂದೆಗೆ ವಕೀಲರ ಮೂಲಕ ನೋಟಿಸ್ ನೀಡಿರುವುದಿಲ್ಲ ಎಂದರೆ ಸರಿ.

ಕಂಚನಹಳ್ಳಿ ಗ್ರಾಮದಲ್ಲಿ ನಮಗೆ ಸೇರಿದ ಸ್ವಂತ ಮನೆ ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತು ಮಾಯಮ್ಮ ರವರ ಹೆಸರಿನಲ್ಲಿರುತ್ತದೆ. ಮನೆ ನಂ.184/104/ಇ ಮನೆಯಲ್ಲಿ ನಾನು ಮತ್ತು ನನ್ನ ಅಣ್ಣ ಸ್ವಾಧೀನಾನುಭವದಲ್ಲಿದ್ದೇನೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ.

ಸಾಕ್ಷಿಗೆ ಕಂಚನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.244/1 ರಲ್ಲಿ 3 ಎಕರೆ 22 ಗುಂಟೆ, ಸರ್ವೆ ನಂ.259/1 ರಲ್ಲಿ 1 ಎಕರೆ ವಿಸ್ತೀರ್ಣದ ಸ್ವತ್ತುಗಳಲ್ಲಿ ವಾದಿ ಮತ್ತು 1 ರಿಂದ 4ನೇ ಪ್ರತಿವಾದಿಗಳ ಜಂಟೀ ಸ್ವಾಧೀನವನ್ನು ಗುರುತಿಸಿದ ಮೇರೆಗೆ ಅದನ್ನು ನಿಡಿ-**1** ಮತ್ತು ನಿಡಿ-**2** ಎಂದು ಗುರುತಿಸಲಾಯಿತು. ಸದರಿ ಸ್ವತ್ತುಗಳು ಹಾಗೂ ಮನೆ ನಮ್ಮ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಸದರಿ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತುಗಳು ನಮ್ಮ ತಂದೆಯ ಹೆಸರಿನಲ್ಲಿದ್ದು, ನಮ್ಮ ತಂದೆ ಮೃತಪಟ್ಟನಂತರ ನಾವು ಸದರಿ ಸ್ವತ್ತುಗಳನ್ನು ಜಂಟೀ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿ.

O.S.No.:386/2014

P.W.:1

ಶ್ರೀ ಗುರುಸಿದ್ದಶಿವಚಾರ್ಯಸ್ವಾಮಿ ರವರು ಸನ್ಯಾಸಿಯಾಗಿರುತ್ತಾರೆ ಎಂದರೆ ಸರಿ. ಅವರು ಮೃತಪಟ್ಟನಂತರ ಶ್ರೀ ಗುರುಸಿದ್ದಶಿವಚಾರ್ಯಸ್ವಾಮಿ ರವರ ಅಣ್ಣನ ಮಗ 5ನೇ ಪ್ರತಿವಾದಿ ವಾರಸುದಾರರಾಗಿ ಕಂದಾಯ ದಾಖಲೆಗಳು ಬದಲಾವಣೆಯಾಗಿರುತ್ತವೆ ಎಂದರೆ ಸರಿ.

ಸದರಿ ಸ್ವತ್ತುಗಳನ್ನು ಹೊರತುಪಡಿಸಿ ನಮ್ಮ ತಂದೆಗೆ ಸೇರಿದ ಬೇರೆ ಆಸ್ತಿಗಳು ಇರುವುದಿಲ್ಲ. ನಮ್ಮ ತಂದೆಯು ಗೃಹಪಯೋಗಿ ಖರ್ಚಿಗಾಗಿ ಹಾಗೂ ಸಾಲವನ್ನು ತೀರಿಸುವ ಸಲುವಾಗಿ ಮತ್ತು ಪ್ರತಿವಾದಿಗಳ ವಿದ್ಯಾಭ್ಯಾಸಕ್ಕಾಗಿ ದಾವಾಸ್ವತ್ತುಗಳನ್ನು ನಮ್ಮ ತಂದೆ ಕರ್ತನಾಗಿದ್ದರಿಂದ ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿಯು ದಾವಾಸ್ವತ್ತಿನಲ್ಲಿದ್ದು, ಕಂದಾಯ ದಾಖಲೆಗಳು ಅವರ ಹೆಸರಿನಲ್ಲಿ ಬರುತ್ತಿದ್ದನ್ನು ನೋಡಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗಾಗಲೀ, 1ನೇ ವಾದಿ, 1 ರಿಂದ 4ನೇ ಪ್ರತಿವಾದಿಗಳಿಗೆ ದಾವಾಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದೆ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಿ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.

O.S.No.:386/2014

P.W.:1